ಆರ್ ಎ ನಂ. 37/2023

ಪಿ ಡಬ್ಲ್ಯು 1

ದಿನಾಂಕ 16/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಬಿ ಆರ್ ವಕೀಲರಿಂದಃ

ಪ್ರಸ್ತುತ ಮೇಲ್ಮನವಿಯನ್ನು ನಾನು ಯಾರ ಯಾರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನನ್ನ ವಿರುದ್ಧ ಯಾರು ಕೇಸು ದಾಖಲು ಮಾಡಿದ್ದರೋ ಅವರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ವಿರುದ್ಧ ಯಾರು ಕೇಸು ಹಾಕಿದ್ದರು ಎಂದರೆ ಸಾಕ್ಷಿ ಮರೆತಿದೆ ಎಂದು ನುಡಿಯುತ್ತಾರೆ. ಪ್ರಸ್ತುತ ಅರ್ಜಿಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ 4 ತಿಂಗಳು ತಡವಾಗಿದ್ದು ಅದನ್ನು ಮನ್ನಾ ಮಾಡಲು ಎಂದು ನುಡಿಯುತ್ತಾರೆ. ಏಕೆ ತಡವಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿರಲಿಲ್ಲ, ಆನಂತರ ನಾನು ಮತ್ತು ನನ್ನ ಅಣ್ಣ ಮಹಾದೇವಪ್ಪ ಮತ್ತು ನೀಲಮ್ಮರವರು ಸೇರಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಮೇಲ್ಮನವಿ ಸಲ್ಲಿಸಲು ಯಾವ ಉದ್ದೇಶದಿಂದ ತಡವಾಗಿದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸಾಕ್ಷಿ ನನಗೆ ವಿಚಾರ ಗೊತ್ತಿರಲಿಲ್ಲ ಆಗಾಗಿ ತಡವಾಗಿದೆ ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿ ಮುದ್ದತ್ತಿನಂದು ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ ಎಂದರೆ ಸರಿ. ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಪರವಾಗಿ ದಾವೆ ನಡೆಸಿದ ವಕೀಲರು ಯಾರು ಎಂದರೆ ಸಾಕ್ಷಿ ತುಮಕೂರಿನ ವಕೀಲರು

ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ತೀರ್ಪಾದ ದಿನ ನಾನು ಮತ್ತು ನನ್ನ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದೇವು ಎಂದರೆ ಸರಿ. ಅದೇರೀತಿ ನನ್ನ ಅಣ್ಣ ಮಹಾದೇವಪ್ಪ ಮತ್ತು ನೀಲಮ್ಮರವರ ಸಹ ಹಾಜರಿದ್ದರು ಎಂದರೆ ಸರಿ. ತೀರ್ಪು ಆದ ನಂತರದಲ್ಲಿ ಪ್ರತಿ ಪಡೆಯಲು ಅರ್ಜಿ ಸಲ್ಲಿಸಿರುತ್ತೇವಾ ಎಂದರೆ ಸಾಕ್ಷಿ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ತೀರ್ಪಾದ ದಿನ ನನ್ನ ವಕೀಲರನ್ನು ಬೇಟಿ ಮಾಡಿದ ನಂತರ ಪುನಃ ಯಾವಾಗ ಬೇಟಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಅವೆಲ್ಲಾ ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಎಷ್ಟು ದಿನಗಳ ನಂತರ ತೀರ್ಪಿನ ಪ್ರತಿಯನ್ನು ಪಡೆಯಲು ನನ್ನ ವಕೀಲರಿಗೆ ಹೇಳಿದ್ದೆ ಎಂದರೆ ಸಾಕ್ಷಿ 4 ತಿಂಗಳ ನಂತರ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಖುದ್ದಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ಯಾರು ಹೇಳಿ ಬರೆಸಿದ್ದು ಎಂದರೆ ಸಾಕ್ಷಿ ನಾನೇ ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತೀರ್ಪಾದ 4 ತಿಂಗಳ ನಂತರ ಪ್ರತಿ ಪಡೆಯಲು ಅರ್ಜಿ ಸಲ್ಲಿಸಲಾಗಿದೆ ಎಂದು ಹೇಳಲಾಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ತೀರ್ಪಿನ ಪ್ರತಿಯನ್ನು ಅರ್ಜಿ ಸಲ್ಲಿಸಿದ ಎಷ್ಟು ದಿನಗಳಲ್ಲಿ ಪಡೆಯಲಾಗಿದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ತೀರ್ಪಿನ ಪ್ರತಿಯನ್ನು ನಾನು ನನ್ನ

ವಕೀಲರ ಮೂಲಕ ಪಡೆದಿರುತ್ತೇನೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ತೀರ್ಪಿನ ಪ್ರತಿಯನ್ನು ಪಡೆದ ದಿನವೇ ನನ್ನ ವಕೀಲರಿಗೆ ಪ್ರತಿಯನ್ನು ಕೊಟ್ಟಿರುತ್ತೇನಾ ಇಲ್ಲವೇ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ನನ್ನ ಪರವಾಗಿ ವಕಾಲತ್ತು ವಹಿಸಿದ್ದ ವಕೀಲರೇ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಡಿಕ್ರಿ ಪ್ರತಿಯನ್ನು ತುಮಕೂರಿನ ವಕೀಲರಿಗೆ ನೀಡದ ನಂತರದಲ್ಲಿ ನಾನು ಬೇರೆ ಯಾವುದೇ ವಕೀಲರನ್ನು ಬೇಟಿ ಮಾಡಿರುವುದಿಲ್ಲ ಎಂದರೆ ಸರಿ. ತುಮಕೂರಿನ ವಕೀಲರಿಗೆ ತೀರ್ಪಿನ ಪ್ರತಿಯನ್ನು ಮೇಲ್ಮನವಿ ಸಲ್ಲಿಸುವಂತೆ ನೀಡಿರುತ್ತೇನಾ ಅಥವಾ ಪರಿಶೀಲಿಸುವಂತೆ ನೀಡಿರುತ್ತೇನಾ ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ. ತೀರ್ಪಿನ ಪ್ರತಿಯನ್ನು ನೀಡಿದ ಎಷ್ಟು ದಿನಗಳ ನಂತರದಲ್ಲಿ ನನ್ನ ವಕೀಲರು ಮೇಲ್ಮನವಿ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೇಲ್ಮನವಿಯನ್ನು ಎಷ್ಟು ದಿನಗಳ ನಂತರದಲ್ಲಿ ಸಲ್ಲಿಸಲಾಗಿದೆ ಎಂದು ನನ್ನ ವಕೀಲರು ನನಗೆ ಹೇಳಿರುತ್ತಾರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಯಾವ ಕಾರಣಕ್ಕಾಗಿ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಲಾಗಿದೆ ಎಂದು ಬರೆಯಲಾಗಿದೆ ಎಂದು ಗೊತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ತಡವಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಾಗಿರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನನ್ನ ಪ್ರಮಾಣ

ಪತ್ರದಲ್ಲಿ ಬರೆಯಲಾಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ತೀರ್ಪು ಆದ ವಿಚಾರ ಗೊತ್ತಾಗಲಿಲ್ಲ ಎಂದು ಬರೆಯಲಾಗಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣದಿಂದಾಗಿ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ ಅಲ್ಲವೇ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಅರ್ಜಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಯಾವ ಕಾರಣದಿಂದ ತಡವಾಗಿ ಎಂದು ಬರೆಯಲಾಗಿದೆ ಎಂಬ ವಿಚಾರದ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಅನಕ್ಷರಸ್ಥೆ ಆಗಾಗಿ ನನಗೆ ಹೇಳಲಾಗುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಷ್ಟು ದಿನ ತಡವಾಗಿದೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿ ಸುಮಾರು 4 ತಿಂಗಳಿಗಿಂತಲೂ ಹೆಚ್ಚು ಎಂದು ನುಡಿಯುತ್ತಾರೆ. ಮೇಲ್ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಯಾವುದೇ ಸಕಾರಣ ಇಲ್ಲದೆ ಇರುವ ಕಾರಣದಿಂದಲೇ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಂದು ವಿಚಾರ ನನ್ನ ಸಾಕ್ಷ್ಯದಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ಯಾವುದೇ ಸಕಾರಣ ಇಲ್ಲದೆ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲ್ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಯಾವುದೇ ಸಕಾರಣ ಮತ್ತು ದಾಖಲೆ ಇಲ್ಲದೆ ಇರುವುದರಿಂದ ನನಗೆ ಪ್ರಸ್ತುತ

ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.